# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

**ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 17-03-2021 ಪ್ರಶ್ನೆ ಸಂಖ್ಯೆ : 1230 (1442)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 17-03-2021

ಉತ್ತರಿಸುವ ಸಚಿವರು : ಕಂದಾಯ ಸಚಿವರು

ವಿಷಯ : ಉಪನೋಂದಣಿಗಳಲ್ಲಿನ ಸಮಸ್ಯೆಗಳ ಬಗ್ಗೆ

(ಅ) ಆಸ್ತಿ ನೋಂದಣಿ ವೇಳೆ ಅಕ್ರಮಗಳನ್ನು ತಡೆಗಟ್ಟುವ ಸಲುವಾಗಿ ಉಪನೋಂದಣಿ ಕಛೇರಿಗಳಲ್ಲಿ ಸರ್ಕಾರ ಜಾರಿ ತಂದಿರುವ ಓಟಿಪಿ ವ್ಯವಸ್ಥೆ ಗಮನರ್ಹವಾದದ್ದು, ಆದರೆ ಇಂತಹ ವ್ಯವಸ್ಥೆಯಿಂದ ಜನರು ಒಂದು ನೋಂದಣಿಗೆ ಎರಡು ತಾಸಿಗೂ ಅಧಿಕ ಸಮಯ ಕಾಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ತಿಳಿಸುವುದು)

(ಆ) ಈ ಪ್ರಕ್ರಿಯೆ ಬಂದ ನಂತರ ನೋಂದಣಿಗಳು ಜಾಸ್ತಿಯಾಗಿವೆಯೇ ಅಥವಾ ಕಡಿಮೆಯಾಗಿದೆಯೇ ; ತಿಳಿಸುವುದು ;

(ಇ) ಈ ಪ್ರಕ್ರಿಯೆ ಜಾರಿಗೆ ಬಂದ ನಂತರ ಒಂದು ನೋಂದಣಿ ಮಾಡಿಸಲು ಕಛೇರಿಗೆ ನೀಡಿದರೆ 15 ದಿನಗಳ ನಂತರ ನೋಂದಣಿ ಮಾಡುವುದಾಗಿ ಮುಂದಿನ ದಿನಾಂಕಗಳನ್ನು ನೀಡಿ ವಾಪಸ್ ಕಳುಹಿಸಲಾಗುತ್ತಿದೆ. ಇದಕ್ಕೆ ಕಾರಣಗಳೇನು;

(ಈ) ಹೊಸ ತಂತ್ರಾಂಶ ಅಳವಡಿಕೆಯಿಂದ ಸರಾಸರಿ 50% ನೋಂದಣಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡಿರುವ ಕ್ರಮಗಳೇನು;

(ಉ) ಈ ತಂತ್ರಾಂಶ ಅಳವಡಿಕೆಯಿಂದ ದಿನೇ ದಿನೇ ಸರ್ವರ್ ಸಮಸ್ಯೆಗಳಿಂದ ನೋಂದಣಿಗಳಾಗದೆ ಸಾರ್ವಜನಿಕರು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಊ) ಸದರಿ ನೋಂದಣಿಗೆ ಅಪರೇಟರ್‌ಗಳ ಕೊರತೆಯಿದ್ದು, ಇದಕ್ಕೆ ಸರ್ಕಾರ ಕೈಗೊಂಡ ಕ್ರಮವೇನು ಮತ್ತು ಹಳೆಯ ಕಂಪ್ಯೂಟರ್‌ಗಳಿಗೆ ಹೊಸ ತಂತ್ರಾಂಶ ಅಳವಡಿಸಲು ಸಾಧ್ಯವಾಗದೆ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅಥವಾ ಎಲ್ಲಾ ಉಪನೋಂದಾಣಾಧಿಕಾರಿ ಕಛೇರಿಗಳಿಗೆ ಹೊಸ ಕಂಪ್ಯೂಟರ್‌ಗಳನ್ನು ನೀಡಿ ಹೊಸ ತಂತ್ರಾಂಶವನ್ನು ಅಳವಡಿಸಲಾಗಿದೆಯೇ?